Hodikehosahalli Tank in Channapatna Taluk

66. Sri T. V. KRISHNAPPA (Channapatna).—

Will the Minister for Public Works be pleased to state :—

(*a*) whether it is a fact that the Tank of Hodikehosahalli in Channapatna taluk was breached last year on account of heavy rains ;

(*b*) whether tenders have been called for and work taken up ;

(*c*) if not the reasons therefor ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) No.

(*c*) The Project is under re-investigation.

ಶ್ರೀ ಟಿ. ವಿ. ಕೃಷ್ಣಪ್ಪ.—ಅದಷ್ಟು ಬೇಗ ಕೆಲಸ ಮುಗಿಸುತ್ತೇವೆಂದು ಉತ್ತರ ಹೇಳಿದೆ. ಹಾಗಾದರೆ ಕೆಲಸ ಮುಗಿಸದೆ ಇರುವುದಕ್ಕೆ ಕಾರಣವೇನು ?

† ಆಲೂರು ಹನುಮಂತಪ್ಪ.—ಎಸ್ಟಿಮೇಟ್ ಪುನರ್ವಿಮರ್ಶೆ ಮಾಡಬೇಕಾಗಿತ್ತು. ಅದಕ್ಕಾಗಿ ತಡವಾಗಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಎರಡು ವರ್ಷದಿಂದ ಇನ್‌ವೆಸ್ಟಿಗೇಷನ್ ಮಾಡುತ್ತಾ ಇರುವುದರ ಅರ್ಥವೇನು ?

ಶ್ರೀ ಆಲೂರು ಹನುಮಂತಪ್ಪ.—ಇಷ್ಟರಲ್ಲೇ ಅದು ಫೈನಲೈಜ್ ಆಗುತ್ತದೆ.

ಶ್ರೀ ಎನ್. ಎ. ಚನ್ನೇಗೌಡ.—ಇನ್ನೂ ಎಷ್ಟು ದಿವಸ ಪರಿಶೀಲನೆ ಮಾಡುತ್ತೀರಿ ? ಅಲ್ಲಿ ಬೆಳೆಗೆ ಎಷ್ಟು ನಷ್ಟವಾಗಿದೆ.

ಶ್ರೀ ಆಲೂರು ಹನುಮಂತಪ್ಪ.—ಬೆಳೆಗೆ ನಷ್ಟವಾಗಿಲ್ಲ.

ಶ್ರೀ ಟಿ. ವಿ. ಕೃಷ್ಣಪ್ಪ.—ಇದಕ್ಕೆ ಇನ್ನೂ ಎಷ್ಟು ದಿವಸ ಬೇಕು ?

ಶ್ರೀ ಆಲೂರು ಹನುಮಂತಪ್ಪ.—ಅದಷ್ಟು ಜಾಗ್ರತೆ ಇದನ್ನು ಮಾಡುತ್ತೇವೆ.

ಶ್ರೀ ಎನ್. ಎ. ಚನ್ನೇಗೌಡ.—ಈ ಕೆರೆಗೆ ಅಚ್ಚುಕಟ್ಟು ಎಷ್ಟು ಇದೆ ?

ಶ್ರೀ ಆಲೂರು ಹನುಮಂತಪ್ಪ.—60 ಎಕರೆ ಇದೆ.

ಶ್ರೀ ಎಚ್. ಎನ್. ನಂಜೇಗೌಡ.—ಪರಿಶೀಲನೆಯಲ್ಲಿರುವ ಈ ಯೋಜನೆಗೆ ಎಸ್ಟಿಮೇಟು ಎಷ್ಟು ಸಾವಿರಕ್ಕೆ ಇದೆ ? ಟೆಂಡರ್ಸ್ ಯಾವಾಗ ಕರೆಯುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಪ್ರಿಲಿಮಿನರಿಯಾಗಿ 99 ಸಾವಿರ ಇದಕ್ಕೆ ತಗಲಬಹುದು ಎಂದು ಎಸ್ಟಿಮೇಟು ಇದೆ. ಇನ್ನೂ ಇನ್‌ವೆಸ್ಟಿಗೇಷನ್ ನಡೆದಿರುವುದರಿಂದ ಇದು ಸ್ವಲ್ಪ ತಡವಾಗಿದೆ.

† Indicates that the remarks or speeches have not been revised by the member concerned